ಇರಬೇಕು ಕುಟುಂಬದಲ್ಲಿ ಅಂದುಕೊಂಡರೆ ಬದುಕಿಗೆ ಏನರ್ಥ? ಕ್ರಿಮಿ, ಕೀಟ, ಪ್ರಾಣಿಗಳಲ್ಲೂ ತಮ್ಮದೇ ಆದಂತಹ ಹೋರಾಟ, ಸಂಘರ್ಷ ಇರುತ್ತದೆ. ಅವೂ ಸಹ ತಮ್ಮದೇ ಆದ ಗುಂಪನ್ನು ಕಟ್ಟಿಕೊಳ್ಳುತ್ತವೆ. ಇಲ್ಲಿಯ ಪ್ರತಿ ವಸ್ತುವಿಗೂ, ಜೀವಿಗೂ ಅದರದೇ ಆದ ಅಸ್ತಿತ್ವ, ಬಂಧನ, ಬಿಡುಗಡೆ, ಮುಕ್ತತೆ, ಸ್ವಾತಂತ್ರ್ಯ ಇರುತ್ತದೆ. ನಿಯಮವಿಲ್ಲದೆ ಯಾವುದೂ ಇಲ್ಲ. ನಿಜ, ಅತಿಯಾದ ನಿಯಮ ತನ್ನಿಂದ ತಾನೆ ಮುರಿದುಹೋಗುತ್ತೆ. ಆದರೆ, ಮುರಿದ ನಿಯಮ ಮತ್ತೊಂದಕ್ಕೆ ಸಿಕ್ಕಿ ಇದೇ ತರಹದ ಅಥವಾ ಮತ್ತೊಂದು ಬೇರೆಯದೇ ಆದ ನಿಯಮಕ್ಕೆ ಸಿಕ್ಕಿ, ಮತ್ತೆ ಇದೇ ಥರ. ಅಲ್ಲದೆ ನಿನಗೆ ಅನ್ನಿಸುವುದು ಎಲ್ಲರಿಗೂ ಅನ್ನಿಸುವುದೇ. ಆದರೆ, ಕೆಲವನ್ನು ಕಾಲ ಎನ್ನುವುದಕ್ಕೆ ಬಿಡಬೇಕಲ್ಲ, ಕಾಲದಲ್ಲಿ ಎಲ್ಲವೂ ತನ್ನಿಂದ ತಾನೆ ಸರಿ ಆಗುತ್ತವೆ.

